**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 12-01-2023</u>**

**<u>ಮುಂದುವರೆದ ಪಾಟೀ ಸವಾಲುಃ 2 ಮತ್ತು 4 ನೇ ಪ್ರತಿವಾದಿ ಪರ ಶ್ರೀ.ವಿ.ಎನ.ಪಿ. ವಕೀಲರಿಂದಃ</u>**

9. ಸರ್ವೆ ನಂ.82/1 ಎ ವಿಸ್ತೀರ್ಣ 3 ಎಕರೆ 11 ಗುಂಟೆ ಇದೆ. ಸದರಿ ಜಮೀನಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಬೊಳಶಾನಟ್ಟಿ ಹಿರೇಕರ ರವರ ಜಮೀನು ಇದೆ, ಸದರಿ ಜಮೀನಿನ ಸರ್ವೆ ನಂಬರ ಹೇಳಲು ಬರುವುದಿಲ್ಲ, ದಕ್ಷಿಣಕ್ಕೆ ಮಾಲ್ಕಿ ರವರ ಜಮೀನು ಇದೆ, ಸದರಿ ಜಮೀನಿನ ಸರ್ವೆ ನಂಬರ ಹೇಳಲು ಬರುವುದಿಲ್ಲ, ಉತ್ತರಕ್ಕೆ ಮಂಗಳೂರ ನವರ ಜಮೀನು ಇದೆ ಅವರ ಹೆಸರು ಗೋತ್ತಿಲ್ಲ. ಸದರಿ ಉತ್ತರಕ್ಕೆ ಇರುವ ಜಮೀನಿನ ಸರ್ವೆ ನಂಬರ ಸಹ ಹೇಳಲು ಬರುವುದಿಲ್ಲ. ಮೇಲೆ ಹೇಳಿದ ಚೆಕಬಂದಿ ಸುಳ್ಳು ಇದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.82/1 ಎ ಜಮೀನನ್ನು ಪ್ರತಿವಾದಿ 2 ರವರು ರೂ.1,50,000/- ಗಳನ್ನು ತಮ್ಮ ಸ್ವಂತ ಹಣವನ್ನು ಕೊಟ್ಟು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಸದರಿ ಆಸ್ತಿಯನ್ನು ನಾವು 6 ಜನ ಕೂಡಿಕೊಂಡು ರೂ.1,55,000/- ಖರೀದಿ ಮಾಡಿದ್ದೇವೆ ಎಂದು ಹೇಳುತ್ತಾರೆ. 6 ಜನರು ಕೂಡಿಕೊಂಡು ರೂ.1,55,000/- ಕೊಟ್ಟಿದ್ದೇವೆ ಎಂದು ತೋರಿಸಲು ದಾಖಲೆ ಇಲ್ಲ. ಪ್ರತಿವಾದಿ 2 ರವರು ಸದರಿ ಆಸ್ತಿಯನ್ನು ಕುಲರ್ಕಣಿ ರವರಿಂದ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾವೆಲ್ಲರೂ ಕೂಡಿಕೊಂಡು ಕುಲಕರ್ಪಿ ರವರಿಂದ ಖರೀದಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಖರೀದಿ ಸಮಯದಲ್ಲಿ ನಾನು ಹಾಜರು ಇದ್ದೆ. ಆ ಸಮಯದಲ್ಲಿ ನನ್ನ ತಂದೆ, ಬಾಬು ಬಡಸ್ಕರ, ಯಲ್ಲಪಾಪ ಕಾಶೆಟ್ಟಿ ವಿಠ್ಠಲ ಬಡಸ್ಕರ ಹಾಜರು ಇದ್ದರು. ಖರೀದಿ ಪತ್ರದಲ್ಲಿ ನನ್ನ ಸಹಿ ಇಲ್ಲ . ಖರೀದಿ

ಪತ್ರ ನನ್ನ ಹೆಸರಿನಲ್ಲಿ ಹಾಗೂ ನಮ್ಮ ತಂದೆಯ ಹೆಸರಿನಲ್ಲಿ ಮಾಡಲು ಯಾವುದೇ ಅಡಚಣೆ ಇರಲಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ತಂದೆಗೆ ವಯಸ್ಸು ಆಗಿದ್ದು ಅವರ ಹೆಸರಿನಲ್ಲಿ ಮಾಡದೆ ಪ್ರತಿವಾದಿ 2 ರವರ ಹೆಸರಿನಲ್ಲಿ ಮಾಡಲಾಗಿತ್ತು. ಸದರಿ ಜಮೀನು ಖರೀದಿ ಮಾಡಲು ನಾವು ಯಾರು ಹಣವನ್ನು ತೊಡಗಿಸಿರಲಿಲ್ಲ ನಾವು ಎಲ್ಲರೂ ಕೂಡಿಕೊಂಡು ಖರೀದಿ ಮಾಡಿದ್ದೆವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನಾನು ಖರೀದಿ ಪತ್ರವನ್ನು ನೋಡಿದ್ದೇನೆ. ಖರೀದಿ ದಿನವೇ ಪ್ರತಿವಾದಿ 2 ರವರಿಗೆ ಸದರಿ ಜಮೀನಿನ ಸ್ವಾಧೀನವನ್ನು ಕುಲಕರ್ಣಿ ರವರು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನಾವೆಲ್ಲರೂ ಪಡೆದಿದ್ದೇವೆ ಎಂದು ಹೇಳುತ್ತಾರೆ. ಖರೀದಿ ಪತ್ರದಲ್ಲಿ ಸ್ವಾಧೀನವನ್ನು ಪ್ರತಿವಾದಿ 2 ರವರಿಗೆ ಕೊಡಲಾಗಿದೆ ಎಂದು ಬರೆದಿದೆ ಎಂದರೆ ಸಾಕ್ಷಿಯು ನಾವೆಲ್ಲರೂ ಕೂಡಿ ಪ್ರತಿವಾದಿ 2 ರವರಿಗೆ ಕೊಟ್ಟಿದ್ದೆವು ಎಂದು ಹೇಳುತ್ತಾರೆ. ಸದರಿ ಖರೀದಿ ಪತ್ರದ ಆಧಾರದ ಮೇರೆಗೆ ಪ್ರತಿವಾದಿ 2 ರವರ ಹೆಸರಿನಲ್ಲಿ ಮಾಲೀಕರು ಹಾಗೂ ಸ್ವಾ ಧೀನದಾರರು ಎಂದು ಡೈರಿ ಆಗಿದೆ ಎಂದರೆ ನಿಜ. ಸದರಿ ಡೈರಿ ಪ್ರಶ್ನೀಸದ್ದೀರಾ ಎಂದರೆ ಸಾಕ್ಷಿಯು ನಾವೆಲ್ಲರೂ ಕೂಡಿ ಇದ್ದೇವು ಆದ್ದರಿಂದ ಸದರಿ ಪ್ರಮೇಯ ಬಂದಿರಲಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ.82/1 ಎ ಆಸ್ತಿಯ ಮೇಲೆ ನಮಗೆ ಯಾರಿಗೂ ಹಕ್ಕು ಇಲ್ಲ ಪ್ರತಿವಾದಿ 2 ರವರ ಸ್ವಯಾರ್ಜೀತ ಆಸ್ತಿ ಎಂದರೆ ಸರಿಯಲ್ಲ.

10. ಸರ್ವೆ ನಂ.82/2 ವಿ.1 ಎಕರೆ 33 ಗುಂಟೆ ಇದೆ. ಸದರಿ ಜಮೀನಿನ ಚೆಕಬಂದಿ ಕೇಳಲಾಗಿ ಸಾಕ್ಷಿಯು ಒಂದೇ ಹೊಲ ಇದೆ ಆದ್ದರಿಂದ ಚೆಕಬಂದಿ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಹೊಲ ನಾನು ನೋಡಿಲ್ಲ ಆದ್ದರಿಂದ ನನಗೆ ಸದರಿ ಜಮೀನಿನ

ಚೆಕಬಂದಿ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನಾನೇ ಸದರಿ ಹೊಲ ಸಾಗುವಳಿ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ. ನಾನು ಸದರಿ ಸಾಗುವಳಿ ಮಾಡುತ್ತಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಜಮೀನು ಸರ್ವೆ ನಂ.82/2 ಪ್ರತಿವಾದಿ 2 ರವರು ದಿನಾಂಕ 25.02.2006 ರಂದು ರೂ.50,000/- ಕೊಟ್ಟು ಸ್ವಂತ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾವೆಲ್ಲರೂ ಕೂಡಿಕೊಂಡು ರೂ.50,000/- ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಸದರಿ ಹಣ ನಾವೆಲ್ಲರೂ ಕೊಟ್ಟಿದ್ದೇವೆ ಎಂದು ತೋರಿಸಲು ದಾಖಲೆ ಇಲ್ಲ. ಸದರಿ ಜಮೀನು ಖರೀದಿಸುವ ಸಮಯದಲ್ಲಿ ನಾನು ಹಾಜರು ಇದ್ದೆ. ನಿಮ್ಮ ಹೆಸರಿನಲ್ಲಿ ಖರೀದಿ ಪತ್ರ ಯಾಕೆ ಮಾಡಿಸಿರಲಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ 2 ರವರು ಹೆಚ್ಚಿನ ವಿದ್ಯಾಭ್ಯಾಸ ಮಾಡಿದ್ದರು ಆದ್ದರಿಂದ ಒಟ್ಟು ಕುಟುಂಬದ ಪರವಾಗಿ ಅವರ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎಂದು ಹೇಳುತ್ತಾರೆ. ಖರೀದಿ ಪತ್ರದಲ್ಲಿ ಒಟ್ಟು ಕುಟುಂಬದ ಪರವಾಗಿ ಪ್ರತಿವಾದಿ 2 ರವರ ಹೆಸರಿನಲ್ಲಿ ಖರೀದಿ ಪತ್ರ ಬರೆಸಿಕೊಳ್ಳಲಾಗುತ್ತಿದೆ ಎಂದು ವಿಷಯ ಬರೆಯಲು ಯಾವುದೇ ಅಡಚಣೆ ಇರಲಿಲ್ಲ ಸಾಕ್ಷಿಯು ನಮಗೆ ನಮ್ಮ ಸಹೋದರನ ಮೇಲೆ ವಿಶ್ವಾಸ ಇತ್ತು ಎಂದು ಹೇಳುತ್ತಾರೆ. ಸರ್ವೆ ನಂ.82/2 ಆಸ್ತಿಯನ್ನು ಪ್ರತಿವಾದಿ 2 ರವರು ತಮ್ಮ ಸ್ವಂತ ಹಣದಿಂದ ಖರೀದಿಸಿದ್ದಾರೆ ನಾವು ಯಾರು ಹಣವನ್ನು ತೊಡಗಿಸಿಲ್ಲ ಎಂದರೆ ಸರಿಯಲ್ಲ. ನನಗಾಗಲೀ, ಉಳಿದ ವಾದಿಯರಿಗಾಗಲೀ ಸದರಿ ಜಮೀನಿನಲ್ಲಿ ಯಾವುದೇ ಹಕ್ಕು ಇಲ್ಲ ಎಂದರ ಸರಿಯಲ್ಲ. ಸದರಿ ಜಮೀನಿನ ಸ್ವಾಧೀನವನ್ನು ಪ್ರತಿವಾದಿ 2 ರವರಿಗೆ ಕೊಡಲಾಗಿದೆ ಎಂದರೆ ಸಾಕ್ಷಿಯು ನಾವೆಲ್ಲರೂ ಪಡೆದಿದ್ದೇವೆ ಎಂದು ಹೇಳುತ್ತಾರೆ. ಖರೀದಿ ಮಾಡಿದ ದಿನಾಂಕದಿಂದ ನಾವು ಇಲ್ಲಿಯವರೆಗೆ ಕಬ್ಜೆಯಲ್ಲಿ ಇದ್ದೇವೆ.

ಕಬ್ಜೆಯಲ್ಲಿ ನಾವೆಲ್ಲರೂ ಇದ್ದೇವೆ ಎಂದು ತೋರಿಸಲು ದಾಖಲೆ ಇಲ್ಲ ಸಾಕ್ಷಿಯು ದಾಖಲೆ ಮಾಡಿಕೊಳ್ಳುವ ಪ್ರಮೇಯ ಬಂದಿರಲಿಲ್ಲ ಎಂದು ಹೇಳುತ್ತಾರೆ. ಸದರಿ ಸರ್ವೆ ನಂ.82/2 ಜಮೀನಿನಲ್ಲಿ ನಾವು ಕಬ್ಜೆಯಲ್ಲಿ ಇದ್ದೆವೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

11. ಸರ್ವೆ ನಂ.82/3 ವಿ. 6 ಎಕರೆ 29 ಗುಂಟೆ ಇದೆ. ಸದರಿ ಜಮೀನಿನ ಮೂಲ ಮಾಲೀಕರು ಮಧುಕರ ಹಣಮಂತ ಕುಲಕರ್ಣಿ ಎಂದರೆ ನಿಜ. ಸದರಿಯವರು ಮಂಗ್ಯಾನಕೋಪ್ಪ ಗ್ರಾಮದವರು. ಸದರಿ ಜಮೀನು ರೂ.2,80,000/- ಖರೀದಿ ಮಾಡಲಾಗಿದೆ ಎಂದರೆ ನಿಜ. ಪ್ರತಿವಾದಿ 2 ರವರು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಎಲ್ಲರೂ ಕೂಡಿ ಖರೀದಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಸದರಿ ಚೆಕಬಂದಿ ಹೇಳಲು ಬರುತ್ತದೆ ಎಂದರೆ ಸಾಕ್ಷಿಯು ಎಲ್ಲವೂ ಒಂದೇ ಜಮೀನು ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಜಮೀನು ಪ್ರತಿವಾದಿ 2 ರವರು ತಮ್ಮ ಸ್ವಂತ ಆದಾಯದಿಂದ ಖರೀದಿ ಮಾಡಿದ ಜಮೀನು ಎಂದರೆ ಸರಿಯಲ್ಲ. ಎಲ್ಲರೂ ಖರೀದಿ ಮಾಡಿದ್ದಾರೆ ಎಂದು ತೋರಿಸಲು ದಾಖಲೆ ಇಲ್ಲ. ಸದರಿ ಜಮೀನಿನ ಮಾಲೀಕರು ಹಾಗೂ ಕಬ್ಜೆದಾರರು ಪ್ರತಿವಾದಿ 2 ರವರು ಎಂದು ದಾಖಲು ಇದೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರವರ ಹೆಸರಿನಲ್ಲಿರುವ ಆಸ್ತಿಗಳಿಗೆ ನಾವು ಹಕ್ಕುದಾರರು ನಮ್ಮ ಹೆಸರುಗಳು ಸಹ ನಮೂದು ಆಗಬೇಕು ಎಂದು ಯಾವುದೇ ಅಪೀಲು ಸಲ್ಲಿಸಿಲ್ಲ ಸಾಕ್ಷಿಯು ನಮ್ಮ ಸಹೋದರನ ಮೇಲಿನ ವಿಶ್ವಾಸಕ್ಕೆ ಸಲ್ಲಿಸಿಲ್ಲ ಎಂದು ಹೇಳುತ್ತಾರೆ. ನಾವು ಎಂದಿಗೂ ಸದರಿ ಜಮೀನ ಕಬ್ಜೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

12. ಹುಬ್ಬಳ್ಳಿಯಲ್ಲಿ ಪ್ರತಿವಾದಿ 2 ರವರು ಒಂದು ಮನೆಯನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನಾವು ಮತ್ತು ನಮ್ಮ ತಂದೆ ಎಲ್ಲರೂ ಕೂಡಿಕೊಂಡು ಖರೀದಿ ಮಾಡಿದ್ದೇವೆ ಎಂದು ಹೇಳುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮುಂದುಡಲಾಯಿತು.

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**